## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ /2021

| | | |
|---|---|---|
| ಸಾಕ್ಷಿದಾರರ ಹೆಸರು | : ಡಾಃ ಸ್ಮಿತಾ .ಜಿ. | ಪಿ ಡಬ್ಲ್ಯೂ ಃ 18 |
| ತಂದೆಯ / ಗಂಡನ ಹೆಸರು | : ಶಿವಮೂರ್ತಿ ಎಸ್ | ಸಿಡಬ್ಲ್ಯೂ ಃ 35 |
| ವಯಸ್ಸು | : 45 ವರ್ಷ | |
| ಉದ್ಯೋಗ | : ಹಿರಿಯ ವೈಜ್ಞಾನಿಕ ಅಧಿಕಾರಿ , ಎಫ್ ಎಸ್ ಎಲ್ , ಬೆಂಗಳೂರು | |
| ವಾಸಸ್ಥಳ | : ಬೆಂಗಳೂರು | |

**ಸಾಕ್ಷಿಯನ್ನು ಈ ದಿನ ದಿಃ 18.05.2024 ರಂದು ವಿ.ಸಿ. ಮೂಲಕ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**Dr.Pratap Kumar.C. Scientific Officer, Fire Arms section, FSL, Bengaluru is present as Co-ordinator.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ಮೈಸೂರಿನ ಆರ್ ಎಫ್ ಎಸ್ ಎಲ್ ನಲ್ಲಿ ಮಾರ್ಚ 2014 ರಿಂದ ಡಿಸೆಂಬರ್ 2019 ರವರೆಗೆ ವೈಜ್ಞಾನಿಕ ಅಧಿಕಾರಿಯಾಗಿ ಮತ್ತು 2023 ರವರೆಗೆ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 28.12.2020 ರಂದು ಮೈಸೂರಿನ ನರಸಿಂಹರಾಜ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 203/20 ಕ್ಕೆ ಸಂಬಂಧಪಟ್ಟಂತೆ ಎರಡು ಸೀಲಾಗಿದ್ದ ವಸ್ತುಗಳನ್ನು ಪಿಸಿ 701 ರವರ ಮೂಲಕ ನಮ್ಮ ಕಛೇರಿಯ ಸ್ವೀಕೃತಿ

ವಿಭಾಗಕ್ಕೆ ಸಲ್ಲಿಸಿದ್ದು ಅವುಗಳನ್ನು ಸ್ವೀಕರಿಸಿ ನೊಂದಣಿ ಮಾಡಿ **BS**951/2020 ಎಂದು ಸಂಖ್ಯೆ ನೀಡಿ ನಮ್ಮ ಜೀವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ನಮ್ಮ ಜೀವ ಶಾಸ್ತ್ರ ವಿಭಾಗದ ಸಹಾಯಕ ನಿರ್ದೇಶಕರು ಎರಡು ಸೀಲಾದ ವಸ್ತುಗಳನ್ನು ನನಗೆ ನೀಡಿ ವಿಶ್ಲೇಷಣೆ ಮಾಡಿ ವರದಿಯನ್ನು ನೀಡಲು ಸೂಚಿಸಿದ್ದರು. ಸದರಿ ವಸ್ತುಗಳನ್ನು ಪರಿಶೀಲಿಸಲಾಗಿ ಅವುಗಳ ಮೇಲಿದ್ದ ಮೊಹರುಗಳು ಮಾದರಿ ಮೊಹರಿನೊಂದಿಗೆ ತಾಳೆಯಾಗಿದ್ದು , ಸುಸ್ಥಿತಿಯಲ್ಲಿದ್ದವು. ಸದರಿ ವಸ್ತುಗಳನ್ನು ಪರೀಕ್ಷೆಗೆ ತೆಗೆದುಕೊಂಡು ನೋಡಲಾಗಿ , ವಸ್ತು ಸಂಖ್ಯೆ 2 ಒಂದು ಪ್ಲಾಸ್ಟಿಕ್ ಮ್ಯಾಟ್ ಆಗಿತ್ತು . ವಸ್ತು ಸಂಖ್ಯೆ 3 **Blood soaked filter paper** ಅಗಿತ್ತು. ಈ ವಸ್ತುಗಳನ್ನು ನಾನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ಈ ಕೆಳಕಂಡಂತೆ ನನ್ನ ಅಬಿಪ್ರಾಯವನ್ನು ನೀಡಿರುತ್ತೇನೆ.

3. ವಸ್ತು ಸಂಖ್ಯೆ 2 ಮತ್ತು 3 ರಲ್ಲಿ ರಕ್ತದ ಕಲೆ ಕಂಡು ಬಂದಿರುತ್ತದೆ . ವಸ್ತು ಸಂಖ್ಯೆ 2 ಮತ್ತು 3 ರಲ್ಲಿರುವ ರಕ್ತದ ಕಲೆಯು ಮನುಷ್ಯನ ರಕ್ತದ ಕಲೆ ಆಗಿರುತ್ತದೆ. ವಸ್ತು ಸಂಖ್ಯೆ 2 ಮತ್ತು 3 ರಲ್ಲಿ ರಕ್ತದ ಕಲೆಯು **O** ಗುಂಪಿನ ರಕ್ತನ ಕಲೆಯಾಗಿರುತ್ತದೆ. ನನ್ನ ಪರೀಕ್ಷೆಗೆ ಸಂಬಂಧಿಸಿದಂತೆ ಒಂದು ವರದಿಯನ್ನು ಸಂಬಂಧಪಟ್ಟ ಪೋಲೀಸ್ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಪರೀಕ್ಷೆಯ ನಂತರ ಎಲ್ಲಾ ವಸ್ತುಗಳನ್ನು ಪುನಃ ಪ್ಯಾಕ್ ಮಾಡಿ ನಮ್ಮ ಕಛೇರಿಯ ಮಾದರಿ ಮೊಹರಿನೊಂದಿಗೆ ಸಂಬಂಧಪಟ್ಟ ತನಿಖಾಧಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಪರೀಕ್ಷ ಮಾಡಿದ ವಸ್ತುಗಳನ್ನು ಈಗ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆಕೆಗೆ ತೋರಿಸಿದ ಪ್ಲಾಸ್ಟಿಕ್ ಮ್ಯಾಟ್ ನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಎಂ ಒ 9 ಎಂದು ಗುರುತುಪಡಿಸಿಕೊಳ್ಳಲಾಗಿದೆ. ನ್ಯಾಯಾಲಯದ ಮುಂದೆ ಈಗ ಸೀಲು ಮಾಡಿದ ಕವರ್ ನಿಂದ **Blood soaked**

**filter paper** ನ್ನು ಹೊರ ತೆಗೆದು ಸಾಕ್ಷಿಗೆ ತೋರಿಸಲಾಗಿ , ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಈಗ ಎಂ ಒ 17 ಎಂದು ಗುರುತುಪಡಿಸಿಕೊಳ್ಳಲಾಯಿತು. ಈಗ ನಾನು ನೀಡಿದ ವರದಿಯನ್ನು ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸ್ಯಾಂಪ್ ಸೀಲನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿ ಸ್ಯಾಂಪಲ್ ಸೀಲನ್ನು ಗುರುತಿಸಿರುತ್ತಾರೆ. ವರದಿಯನ್ನು ನಿಪಿ 55 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 55(ಎ) ಎಂತಲು, ಸ್ಯಾಂಪಲ್ ಸೀಲನ್ನು ನಿಪಿ 56 ಎಂತಲು ಗುರುತುಪಡಿಸಿಕೊಳ್ಳಲಾಯಿತು. ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 56(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

4. ವಸ್ತು ಸಂಖ್ಯೆ2 ಮತ್ತು 3 ನ್ನು ಮೊದಲು **Preliminary test** ಗೆ ಒಳಪಡಿಸಿ **Benzidine Test** ಗೆ ಒಳಪಡಿಸಿ ನಂತರ ಅದನ್ನು **Confirm** ಮಾಡಲು **Takayama test** ಮಾಡಿರುತ್ತೇನೆ. ಅದು ಮನುಷ್ಯನ ರಕ್ತ ಎಂದು ಹೇಳಲು **Cross over Electrophoresis** ಮಾಡಿರುತ್ತೇನೆ. **Serological Examination itself is Chemical examination**. ತನಿಖಾಧಿಕಾರಿಯವರು ಮೃತನ ರಕ್ತದ ಗುಂಪಿನ ಬಗ್ಗೆ ಮಾಹಿತಿಯನ್ನೇನು ನೀಡಿರಲಿಲ್ಲ. ಎಂ ಒ 9 ನ್ನು ನನ್ನಲ್ಲಿಗೆಕಳುಹಿಸಿರಲಿಲ್ಲ ಎನ್ನುವುದು ಸರಿಯಲ್ಲ. ರಕ್ತಕ್ಕೆ ಸಂಬಂಧಪಟ್ಟಂತೆ ಆರ್ ಹೆಚ್ ಫ್ಯಾಕ್ಟರ್ ಟೆಸ್ಟ್ ಮಾಡಿರುವುದಿಲ್ಲ. ನಿಪಿ 55 ವರದಿಯನ್ನು ತನಿಖಾಧಿಕಾರಿಯವರ ಕೋರಿಕೆಯ ಮೇರೆಗೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ.

ಯಾವುದೇ ಆಧಾರವಿಲ್ಲದೇ ಆ ರಕ್ತದ ಕಲೆ ಮನುಷ್ಯನ ರಕ್ತ **O** ಗುಂಪಿಗೆ ಸೇರಿದ್ದು ಎಂದು ಸುಳ್ಳು ವರದಿಯನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಎಂ ಒ **9** ನ್ನು ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯದ ಮುಂದೆ ನೋಡಿರುತ್ತೇನೆ ಎನ್ನುವುದು ಸರಿಯಲ್ಲ. ಎಂ ಒ **9** ರ ಮೇಲೆ ಯಾವುದೇ ರಕ್ತದ ಕಲೆಗಳು ಇರಲಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**